


ಹೆಚ್ಚಾಗುವ ಈ ವಿದ್ಯಮಾನ ಜಪಾನ್‌ಗೆ ಹಲವು ಸಮಸ್ಯೆಗಳನ್ನು ತಂದೊಡ್ಡಿದೆ. ಆರೋಗ್ಯ ಕ್ಷೇತ್ರದ ಮೇಲೆ ಸರ್ಕಾರ ಮಾಡುವ ವೆಚ್ಚ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಇದೇ ವೇಳೆ ದೇಶದಲ್ಲಿ ದುಡಿಯುವ ಜನರ ಪ್ರಮಾಣ, ತೆರಿಗೆ ಕಟ್ಟುವವರ ಸಂಖ್ಯೆ ಕಡಿಮೆಯಾಗುತ್ತಿದೆ. ವೃದ್ಧರೇನೋ ಸಾಕಷ್ಟು ಪ್ರಮಾಣದಲ್ಲಿದ್ದಾರೆ. ಆದರೆ ಅವರ ಆರೈಕೆ ಮಾಡಲು ಸಾಕಷ್ಟು ಪ್ರಮಾಣದಲ್ಲಿ ತರುಣರು ಇಲ್ಲ.

ಜಪಾನ್ ಏಕಾಏಕಿ ಈ ಸ್ಥಿತಿ ತಲುಪಲಿಲ್ಲ. 1900ರಲ್ಲಿ ಜಪಾನ್‌ನ ಜನಸಂಖ್ಯೆ 4.4 ಕೋಟಿ ಇತ್ತು. 2000ಕ್ಕೆ ಇದು 12.8 ಕೋಟಿ ಮುಟ್ಟಿತ್ತು. ಆದರೆ ನಂತರದ ದಿನದ ದಿನಗಳಲ್ಲಿ ಜನನ ದರ ಕ್ಷಿಪ್ರವಾಗಿ ಕುಸಿಯುತ್ತ ಬಂತು. 1970ರಲ್ಲಿ ಜಪಾನ್ ಮಹಿಳೆಯರು ಸರಾಸರಿ 2.1 ಮಕ್ಕಳನ್ನು ಹೊಂದಿದ್ದರು. ಈಗ ಅದು ಕೇವಲ 1.4ಕ್ಕೆ ಕುಸಿದಿದೆ.

ಇದೇ ಪರಿಸ್ಥಿತಿ ಮುಂದುವರಿದರೆ ಜಪಾನ್‌ಗೆ ಈಗಿರುವಷ್ಟು ಜನಸಂಖ್ಯೆ ಉಳಿಸಿಕೊಳ್ಳಲೂ ಆಗುವುದಿಲ್ಲ. 2025ರ ವೇಳೆಗೆ ಜಪಾನ್‌ನಲ್ಲಿ ಸರಾಸರಿ ಮಕ್ಕಳ ಪ್ರಮಾಣ ಪ್ರತಿ ಮಹಿಳೆಗೆ 1.8ಕ್ಕೆ ಹೆಚ್ಚಾಗಬೇಕು, ದೇಶದ ಜನಸಂಖ್ಯೆ ಎಂದಿಗೂ 10 ಕೋಟಿಗಿಂತ ಕಡಿಮೆಯಾಗಬಾರದು ಎಂದು ಅಲ್ಲಿನ ಸರ್ಕಾರ ಗುರಿಯನ್ನೇನೋ ಹಾಕಿಕೊಂಡಿದೆ. ಹತ್ತಾರು ಯೋಜನೆಗಳನ್ನು ಪ್ರಕಟಿಸಿದೆ.

## ಏನು ಕಾರಣ?

ಎರಡನೇ ಮಹಾಯುದ್ಧದ ನಂತರದ ಬೆಳವಣಿಗೆಗಳು ವ್ಯಾಪಕ ನಗರೀಕರಣಕ್ಕೆ ಪೂರಕ ವಾತಾವರಣ ನಿರ್ಮಿಸಿದವು. ಗ್ರಾಮೀಣ ಪ್ರದೇಶಗಳಿಂದ ನಗರಗಳತ್ತ ದೊಡ್ಡಮಟ್ಟದಲ್ಲಿ ಜನರು ವಲಸೆ ಬಂದರು. ನಗರ ಆರ್ಥಿಕತೆ ಬೀಗುತ್ತಿದ್ದರೆ ಗ್ರಾಮೀಣ ಆರ್ಥಿಕತೆ ಸೊರಗಿತು. ಕಾರ್ಮಿಕ ಕಾನೂನುಗಳಲ್ಲಿ ಆದ ಬದಲಾವಣೆಗಳೂ ಕುಟುಂಬಗಳ ಬಾಂಧವ್ಯದ ಮೇಲೆ ಪರಿಣಾಮ ಬೀರಿದವು. ದುಡಿಮೆಯೇ ಸರ್ವಸ್ವ ಎಂದುಕೊಂಡ ದಂಪತಿಗಳಿಗೆ ಮಕ್ಕಳು ಭಾರ ಎನಿಸಿದ್ದೂ ಅಲ್ಲಿನ ಇಂದಿನ ಸ್ಥಿತಿಗೆ ಮತ್ತೊಂದು ಕಾರಣ.

ಜಪಾನ್‌ನ ರಾಜಧಾನಿ ಟೋಕಿಯೊ ಅಥವಾ ಯಾವುದೇ ದೊಡ್ಡ ನಗರ–ಪಟ್ಟಣಗಳನ್ನು ನೋಡಿದಾಗ ಜನಸಂಖ್ಯೆ ಕುಸಿಯುತ್ತಿರುವ ಸಣ್ಣ ಸೂಚನೆಯೂ ಸಿಗುವುದಿಲ್ಲ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ತಿರುಗಾಡಿದಾಗ ಮಾತ್ರ ಪರಿಸ್ಥಿತಿ ಎಷ್ಟು ಹದಗೆಟ್ಟಿದೆ ಎಂದು ಅರ್ಥವಾಗುತ್ತೆ.

ನಾಗೊರೊ ಗ್ರಾಮದಲ್ಲಿ ಗೊಂಬೆಗಳ ಮೂಲಕ ಜೀವಂತಿಕೆ ತಂದುಕೊಟ್ಟ ಅಯಾನೊ ಪ್ರಯೋಗ ಇದೇ ಕಾರಣಕ್ಕೆ ಜಗತ್ತಿನ ಗಮನ ಸೆಳೆಯುತ್ತಿದೆ. ಕೃತಕ ಬುದ್ಧಿಮತ್ತೆ, ರೊಬೋಟ್‌ಗಳ ಮೂಲಕ ಮನುಷ್ಯರಿಗೆ ಪರ್ಯಾಯ ಸೃಷ್ಟಿಸುವ ರಭಸದ ಓಟದ ಬಗ್ಗೆ ಓದುವಾಗಲೆಲ್ಲಾ, 'ಜೀವಂತ ಇದ್ದವರು ಏನಾದರೂ? ಏನಾಗುತ್ತಾರೆ?' ಎಂಬ ಪ್ರಶ್ನೆಯೂ ಮನಸ್ಸಿಗೆ ಬರುತ್ತದೆ.

ಅಂದಹಾಗೆ ಮತ್ತೊಂದು ಮಾತು, 1991ರಲ್ಲಿ ನಮ್ಮ (ಭಾರತದ) ಜಿಡಿಪಿಯಲ್ಲಿ ಗ್ರಾಮೀಣ ಆರ್ಥಿಕತೆಯು ಶೇ 55ರ ಪಾಲು ಹೊಂದಿತ್ತು. ಆದರೆ 2019ರಲ್ಲಿ ಈ ಪ್ರಮಾಣ ಶೇ 28ಕ್ಕೆ ಕುಸಿಯಿತು. 28 ವರ್ಷಗಳಲ್ಲಿ ಆದ 28ರ ಬದಲಾವಣೆಯನ್ನು ಸೂಕ್ಷ್ಮವಾಗಿ ಗಮನಿಸಿ. ನಮ್ಮ ಹಳ್ಳಿಗಳಲ್ಲೂ ಗೊಂಬೆ ಕಟ್ಟುವ ಕಾಲ ಬಂದೀತು ಎಂಬ ಆತಂಕವಾಯಿತೆ?

### ಎಲ್ಲೆಲ್ಲೂ ಹಿರಿಯರೇ

ಜಪಾನ್‌ನ ಸರಾಸರಿ ಆಯಸ್ಸಿನ ಪ್ರಮಾಣವೂ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಸದ್ಯ ಅಲ್ಲಿನವರ ಸರಾಸರಿ ಆಯಸ್ಸಿನ ಪ್ರಮಾಣ 87 ವರ್ಷ. ಈ ವಿದ್ಯಮಾನವೂ ಜಪಾನ್‌ಗೆ ಪೂರಕವಾಗಿಲ್ಲ ಎನ್ನುವುದು ವಿಪರ್ಯಾಸ. ಅಲ್ಲಿರುವ 12 ಕೋಟಿ ಜನರಲ್ಲಿ ಸುಮಾರು 67 ಸಾವಿರ ಮಂದಿ 100 ವರ್ಷ ದಾಟಿದವರು. ಇದೇ ಕಾರಣಕ್ಕೆ ವಿಶ್ವದಲ್ಲಿಯೇ ಅತಿಹೆಚ್ಚು ಶತಯುಷಿಗಳಿರುವ ದೇಶವೆಂಬ ಕೀರ್ತಿಗೂ ಜಪಾನ್ ಪಾತ್ರವಾಗಿದೆ. 65 ವರ್ಷ ದಾಟಿದ ಹಿರಿಯ ನಾಗರಿಕರು ದೇಶದ ಒಟ್ಟು ಜನಸಂಖ್ಯೆಯ ಕಾಲುಭಾಗಕ್ಕಿಂತಲೂ ಹೆಚ್ಚಾಗಿದ್ದಾರೆ.

ಅಂದಹಾಗೆ ಮತ್ತೊಂದು ಮಾತು, ಜಪಾನ್‌ನ ಸೂಪರ್ ಮಾರ್ಕೆಟ್‌ಗಳಲ್ಲಿ ಮಕ್ಕಳ ಡೈಪರ್‌ಗಳಿಗಿಂತಲೂ ವೃದ್ಧರ ಡೈಪರ್‌ಗಳೇ ಹೆಚ್ಚು ಮಾರಾಟವಾಗುತ್ತವಂತೆ.